**ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *16.07.2024* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

. ಈಗ ನಾನು ನೋಡುತ್ತಿರುವ ದಾಖಲೆಗಳು ನಾನು ಆರೋಪಿತರಿಗೆ ಕೊಟ್ಟಿದ್ದ *4* ಚೆಕ್ ಗಳು ಮತ್ತು ಬಾಂಡ್ ಪೇಪರ್ ಇರುತ್ತವೆ. ಸದರಿ ದಾಖಲೆಗಳನ್ನು ನಿ.ಪಿ-*13* ರಿಂದ *17* ಎಂದು ಗುರುತಿಸಿದೆ. ಸದರಿ ಸಹಿಗಳನ್ನು ನಿ.ಪಿ-*13(ಎ)* ಇಂದ *17(ಎ)* ಎಂದು ಗುರುತಿಸಿದೆ. ಆ ಚೆಕ್ ಗಳ ಮೇಲಿನ ಸಹಿಗಳು ನನ್ನವೇ ಇವೆ. ನಾನು ಪೋಲೀಸರ ಮುಂದೆ ಪವಿತ್ರ ಎನ್ನುವವರು ಆರೋಪಿತರಿಂದ ಸಾಲ ಪಡೆದು ಹೆಚ್ಚಿನ ಬಡ್ಡಿ ಕೇಳಿದ್ದರಿಂದ ವಿಷ ಸೇವಿಸಿ ಮರಣಹೊಂದಿದ್ದ ಬಗ್ಗೆ ಮತ್ತು ನಾನು ಆರೋಪಿತರಿಂದ ಸಾಲ ಪಡೆಯುತ್ತಿದ್ದ ಬಗ್ಗೆ ಹೇಳಿಕೆ ಕೊಟ್ಟಿಲ್ಲ.

**ಈ ಹಂತದಲ್ಲಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

2. ನಾನು ಸಹ ಆರೋಪಿತರಿಂದ ಅವಶ್ಯಕತೆ ಇದ್ದಾಗ ಬಡ್ಡಿಗೆ ಸಾಲ ಪಡೆಯುತ್ತಿದ್ದೆ ಎಂದರೆ ಸರಿಯಲ್ಲ. ನಾನು ಆರೋಪಿತರ ಬಳಿ *70,000/-* ಗಳನ್ನು ಸಾಲವಾಗಿ ಪಡೆದಾಗ ಆರೋಪಿತರು ಶೇ.*10* ರಷ್ಟು ಬಡ್ಡಿ ಕೊಡುವಂತೆ ಹೇಳಿ ನನಗೆ ಹಣವನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ಸಾಲ ಪಡೆದಾಗ ನಾನು ಎರಡು ಚೆಕ್ ಗಳನ್ನು ಆರೋಪಿತರಿಗೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಾನು ಹಣ ವಾಪಸ್ಸು ಮಾಡಿದ ಬಳಿಕ ಚೆಕ್ ಗಳನ್ನು ವಾಪಸ್ಸು ಕೇಳಿದಾಗ ಆರೋಪಿತರು ಅಲ್ ಮೇರಾ ಬೀಗ ಕಳೆದುಹೋಗಿದೆ ಹುಡುಕಿ ಕೊಡುತ್ತೇನೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ನಂತರ ನಾನು

*2014* ನೇ ಇಸವಿಯಲ್ಲಿ ಪುನಃ *50,000/-* ಸಾಲ ಕೇಳಿದಾಗ ಆರೋಪಿತರು ನನ್ನಿಂದ ಎರಡು ಚೆಕ್ ಗಳನ್ನು ಮತ್ತು *200/-* ರೂಪಾಯಿ ಬಾಂಡ್ ಪೇಪರ್ ಗಳನ್ನು ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ.

*3.* ನನ್ನ ಹಳೇ ಮನೆ ಬಳಿ ಇರುವ ಪವಿತ್ರ ಕುಮಾರಿ ಎನ್ನುವವರಿಗೆ ಆರೋಪಿತರು ಸಾಲ ನೀಡಿದ್ದು ಅವರು ಹಣ ವಾಪಸ್ಸು ನೀಡದೇ ಇದ್ದಾಗ ಅವರಿಗೆ ಬಡ್ಡಿ ಮತ್ತು ಹಣಕ್ಕಾಗಿ ಟಾರ್ಚರ್ ನೀಡಿ ಗಲಾಟೆ ಮಾಡುತ್ತಿದ್ದು ಬಾಯಿಗೆ ಬಂದಂತೆ ಬೈಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದೇ ಕಾರಣಕ್ಕೆ ದಿಃ*11.06.2015* ರಂದು ಪವಿತ್ರ ಕುಮಾರಿಯವರು ಮನೆಯಲ್ಲಿ ವಿಷ ಕುಡಿದು ಆಸ್ಪತ್ರೆಗೆ ದಾಖಲಿಸಿದಾಗ ಮರಣಹೊಂದಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ಪೋಲೀಸರು ಆರೋಪಿತರ ವಿರುದ್ಧ ತನಿಖೆ ಮಾಡುವಾಗ ನನ್ನ ಚೆಕ್ ಗಳು ಮತ್ತು ಬಾಂಡ್ ಅನ್ನು ವಶಕ್ಕೆ ಪಡೆದಿದ್ದರು ಎಂದರೆ ಸರಿಯಲ್ಲ. ಆರೋಪಿತರು ಪವಿತ್ರ ಕುಮಾರಿಯವರಿಗೆ ಹೆಚ್ಚಿಗೆ ಬಡ್ಡಿ ಕೊಡುವಂತೆ ಒತ್ತಾಯಿಸಿ ಪೀಡಿಸಿದ್ದರಿಂದ ಅವರು ವಿಷ ಸೇವಿಸಿ ಮರಣಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಕುರಿತು ನಾನು ------------ ಗುರುತಿಸುತ್ತೇನೆ ಎಂದುಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-*18* ಎಂದು ಗುರುತಿಸಿದೆ. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಸಮಯ ಕೋರಿದ್ದು ಸೂಕ್ತ ಕಾರಣ ಹೇಳದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು**

**ಮರು ವಿಚಾರಣೆಃ- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*